# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ

ಎ.ವಿಲೇ.ನಂ.ಕಂ.ಪಹಣಿ.ಅಪೀಲು:97/2012-13 ದಿನಾಂಕ:07.06.2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**
**ಸಹಾಯಕ ಆಯುಕ್ತರು, ಹೊಸಪೇಟೆ**

**ವಾದಿಗಳು: ಶ್ರೀ/ ಶ್ರೀಮತಿ**

1. ಗೌಡರ ಚನ್ನಬಸಪ್ಪ ತಂದೆ ದಿ॥ ಗೌಡರ ಸಿದ್ದರಾಮಪ್ಪ,
2. ಗೌಡರ ಸಿದ್ದರಾಮಪ್ಪ ತಂದೆ ದಿ॥ ಗೌಡರ ಸಿದ್ದರಾಮಪ್ಪ,

**ಉಭಯರ ವಾಸ:** ಸಾಸಲವಾಡ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.

[ಶ್ರೀ ಎಂ.ಕಾಳೀದಾಸ, ವಕೀಲರು, ಹೊಸಪೇಟೆ]

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1. ಜಿ.ಸಿದ್ದಪ್ಪ ತಂದೆ ದಿ॥ ಗೌಡರ ಬಸಪ್ಪ,
2. ಸಿದ್ದರಾಮಕ್ಕ ತಂದೆ ದಿ॥ ಗೌಡರ ಸಿದ್ದರಾಮಪ್ಪ,
3. ಜಿ.ಸಿದ್ದರಮೇಶ ತಂದೆ ದಿ॥ ಗೌಡರ ಬಸಪ್ಪ,
4. ಜಿ.ಚನ್ನಬಸವನಗೌಡ ತಂದೆ ದಿ॥ ಗೌಡರ ಬಸಪ್ಪ, **ಮೇಲಿನ ಎಲ್ಲರ ವಾಸ:** ಸಾಸಲವಾಡ ಗ್ರಾಮ, ಕೂಡ್ಲಿಗಿ ತಾಲೂಕು, ಬಳ್ಳಾರಿ ಜಿಲ್ಲೆ.
5. ತಹಶೀಲ್ದಾರರು, ಕೂಡ್ಲಿಗಿ.

********

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಕೂಡ್ಲಿಗಿ | ಕೂಡ್ಲಿಗಿ | ಹಿರೇಹೆಗ್ಡಾಳ್ | 783/1 | 02 ಎಕರೆ 42 ಸೆಂಟ್ಸ್ |
| | | | 783/2 | 02 ಎಕರೆ 59 ಸೆಂಟ್ಸ್ |
| | | | 604/ಬಿ | 00 ಎಕರೆ 58 ಸೆಂಟ್ಸ್ |
| | | | 604/ಸಿ | 00 ಎಕರೆ 57 ಸೆಂಟ್ಸ್ |
| | | | 605/ಎ | 00 ಎಕರೆ 59 ಸೆಂಟ್ಸ್ |
| | | | 605/ಬಿ | 00 ಎಕರೆ 58 ಸೆಂಟ್ಸ್ |
| | | | 605/ಸಿ | 00 ಎಕರೆ 58 ಸೆಂಟ್ಸ್ |
| | | | 605/ಡಿ | 00 ಎಕರೆ 56 ಸೆಂಟ್ಸ್ |
| | | | 716 | 02 ಎಕರೆ 60 ಸೆಂಟ್ಸ್ |
| | | | 717 | 01 ಎಕರೆ 82 ಸೆಂಟ್ಸ್ |
| | | | 719 | 01 ಎಕರೆ 63 ಸೆಂಟ್ಸ್ |

**ಪೀಠಿಕೆ:**

ಕೂಡ್ಲಿಗಿ ತಾಲೂಕು ಕೂಡ್ಲಿಗಿ ಹೋಬಳಿ ಹಿರೇಹೆಗ್ಡಾಳ್ ಗ್ರಾಮದ ಸ.ನಂ.783/1 ವಿಸ್ತೀರ್ಣ:02 ಎಕರೆ 42 ಸೆಂಟ್ಸ್; ಸ.ನಂ.783/2 ವಿಸ್ತೀರ್ಣ:02 ಎಕರೆ 59 ಸೆಂಟ್ಸ್; ಸ.ನಂ.604/ಬಿ ವಿಸ್ತೀರ್ಣ:00 ಎಕರೆ 58 ಸೆಂಟ್ಸ್; ಸ.ನಂ.604/ಸಿ ವಿಸ್ತೀರ್ಣ:00 ಎಕರೆ 57 ಸೆಂಟ್ಸ್; ಸ.ನಂ.605/ಎ ವಿಸ್ತೀರ್ಣ:00 ಎಕರೆ 59 ಸೆಂಟ್ಸ್; ಸ.ನಂ.605/ಬಿ ವಿಸ್ತೀರ್ಣ:00 ಎಕರೆ 58 ಸೆಂಟ್ಸ್; ಸ.ನಂ.605/ಸಿ ವಿಸ್ತೀರ್ಣ:00 ಎಕರೆ 58 ಸೆಂಟ್ಸ್; ಸ.ನಂ.605/ಡಿ ವಿಸ್ತೀರ್ಣ:00 ಎಕರೆ 56 ಸೆಂಟ್ಸ್; ಸ.ನಂ.716 ವಿಸ್ತೀರ್ಣ:02 ಎಕರೆ 60 ಸೆಂಟ್ಸ್; ಸ.ನಂ.717 ವಿಸ್ತೀರ್ಣ:01 ಎಕರೆ 82 ಸೆಂಟ್ಸ್; ಸ.ನಂ.719 ವಿಸ್ತೀರ್ಣ:01 ಎಕರೆ 63 ಸೆಂಟ್ಸ್; ವಿವಾದಾಸ್ಪದ ಜಮೀನುಗಳಿಗೆ ಸಂಬಂಧಿಸಿದಂತೆ ತಹಶೀಲ್ದಾರರು, ಕೂಡ್ಲಿಗಿ ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಸಂ/ಕಂ/ಪಹಣಿ/ವಿವಾದ/18/2012-13 ದಿನಾಂಕ:02.07.2012 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ಮೇಲ್ಮನವಿಯನ್ನು ಮತ್ತು ಸದರಿ ಕಾಯ್ದೆಯ ಕಲಂ 55 ರಡಿಯಲ್ಲಿ ಪ್ರಶ್ನಿತ ಆದೇಶಕ್ಕೆ ಪ್ರಕರಣ ಇತ್ಯರ್ಥವಾಗುವವರೆಗೆ ತಡೆಯಾಜ್ಞೆಯನ್ನು ಕೋರಿ ವಾದಿಪರ ವಕೀಲರು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಿ, ಸದರಿ ಪ್ರಶ್ನಿತ ಆದೇಶಕ್ಕೆ ಮುಂದಿನ ವಿಚಾರಣೆ ದಿನಾಂಕದವರೆಗೆ ಮಾತ್ರ ತಡೆಯಾಜ್ಞೆಯನ್ನು ನೀಡಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ:04.09.2012 ಕ್ಕೆ ನಿಗಧಿಪಡಿಸಿ ಉಭಯಪಕ್ಷಗಳಿಗೆ ನೋಟೀಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ಆದರೆ, ವಿಚಾರಣೆ ಪ್ರಾರಂಭಿಸಿದಾಗಿನಿಂದ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿದ್ದು, ಪ್ರಕರಣದಲ್ಲಿ ಆಸಕ್ತಿ ಇಲ್ಲದೇ ಇರುವುದು ಕಂಡುಬಂದಿರುತ್ತದೆ. ಆದುದರಿಂದ, ಪ್ರಕರಣವನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲು ಈ ಕೆಳಕಂಡಂತೆ

## -:ಆದೇಶ:-

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ ಉಭಯ ಪಕ್ಷಗಾರರು ಸತತವಾಗಿ ಗೈರುಹಾಜರಾಗಿರುವುದರಿಂದ, ಸದರಿ ಅಪೀಲನ್ನು ಇದೇ ಹಂತದಲ್ಲಿ ಮುಕ್ತಾಯಗೊಳಿಸಲಾಗಿದೆ. (dismissed for default).

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:07.06.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]
ಸಹಾಯಕ ಆಯುಕ್ತರು,
ಹೊಸಪೇಟೆ.

ವಾದಿ : ಪ್ರತಿವಾದಿಗಳಿಗೆ
**ಪ್ರತಿಯನ್ನು:** ತಹಶೀಲ್ದಾರರು, ಕೂಡ್ಲಿಗಿ ಇವರಿಗೆ ಸಂಬಂಧಿಸಿದ ಮೂಲ ಕಡತದೊಂದಿಗೆ
ಸೂಕ್ತ ಕ್ರಮಕ್ಕಾಗಿ ರವಾನಿಸಿದೆ.

ವಾನಿಸಲಾಗಿದೆ :
ದಿನಾಂಕ : 14/6/16
ದಿನಾಂಕ :